Date :05-07-2016



# ಅಡಿಕೆ ಆಮದು ನಿಷೇಧಕ್ಕೆ ಮನವಿ

ಕಳಪೆ ಗುಣಮಟ್ಟದ ಅಡಿಕೆ ಆಮದಾಗುತ್ತಿರುವುದು ವಿಶ್ವದ ಅಗ್ರಗಣ್ಯ ಅಡಿಕೆ ಉತ್ಪಾದಕ ದೇಶವಾದ ಭಾರತದ ಗಂಭೀರ ಸಮಸ್ಯೆಯಾಗಿದೆ. ಅಡಿಕೆ ಉತ್ಪಾದನೆಯಲ್ಲಿ ಭಾರತ ಸ್ವಾವಲಂಭಿಯಾಗಿದ್ದು ಇಲ್ಲಿನ ಅಡಿಕೆ ಉತ್ತಮ ಗುಣಮಟ್ಟದ್ದಾಗಿದೆ. ದೇಶಕ್ಕೆ ಈಗ ಯಾವುದೇ ಅಡಿಕೆ ಆಮದಿನ ಅವಶ್ಯಕತೆಯಿಲ್ಲ ಮಾತ್ರವಲ್ಲ ಬೇಡಿಕೆಗನುಗುಣವಾದ ಪೂರೈಕೆ ಇದೆ. ಈ ಪರಿಸ್ಥಿತಿಯಲ್ಲಿ ನಿರಂತರ ಅಡಿಕೆ ಆಮದಾಗುತ್ತಿರುವುದರಿಂದ ಅಡಿಕೆ ದರ ಕುಸಿತವಾಗಿದ್ದು, ದರ ಕುಸಿತ ತಡೆಗೆ ಅಡಿಕೆಯ ಆಮದು ಸಂಪೂರ್ಣ ನಿಷೇಧ ಅನಿವಾರ್ಯವಾಗಿದೆಯೆಂದು ಕ್ಯಾಂಪ್ಕೋ ವನ್ನೊಳಗೊಂಡ ಬೆಳೆಗಾರರ,ಮ್ಯಾಮ್ಕೋಸ್, ತುಮ್ಕೋಸ್, ಟಿಸಿಸ್ ರ ಸಹಕಾರಿ ಸಂಸ್ಥೆಗಳ ಪ್ರತಿನಿಧಿಗಳು ಹಾಗೂ ಕೇಂದ್ರ ಸಚಿವರು, ಚುನಾಯಿತ ಜನಪ್ರತಿನಿಧಿಗಳನ್ನೊಳಗೊಂಡ ನಿಯೋಗ ಕೇಂದ್ರ ಸಚಿವೆ ನಿರ್ಮಲಾ ಸೀತಾರಾಮನ್ ಅವರಿಗೆ ಪರಿಸ್ಥಿತಿಯ ಗಂಭೀರತೆಯನ್ನು ಮನವರಿಕೆ ಮಾಡಿಕೊಟ್ಟು ಮನವಿಯನ್ನು ಅರ್ಪಿಸಿದರೆನ್ನಲಾಗಿದೆ.

ಮನವಿಗೆ ಪೂರಕವಾಗಿ ಸ್ಪಂದಿಸಿದ ಸಚಿವರು ಕ್ಯಾಂಪ್ಕೊ ಹಾಗೂ ಮ್ಯಾಮ್ಕೋಸ್ ಸಂಸ್ಥೆಗಳು ಸಲ್ಲಿಸಿರುವ ಪ್ರಸ್ತಾಪನೆಗಳನ್ನು ಪರಿಶೀಲಿಸಿ ಅಡಿಕೆಯ ಗುಣಮಟ್ಟ ನಿಗದಿಗೆ ನಿಯಮ ರೂಪಿಸುವುದಲ್ಲದೆ ಕಳಪೆ ಗುಣಮಟ್ಟದ ಅಡಿಕೆಯನ್ನು ನಿರ್ದಾಕ್ಷಿಣ್ಯವಾಗಿ ತಿರಸ್ಕರಿಸುವುದಾಗಿ ಹಾಗೂ ಅಡಿಕೆ ಉತ್ಪಾದನೆಯಾಗದ ರಾಷ್ಟ್ರಗಳಿಂದ ಅಡಿಕೆ ಆಮದಾಗುತ್ತಿರುವುದನ್ನು ತಡೆಯುವುದಾಗಿ ತಿಳಿಸಿದರೆನ್ನಲಾಗಿದ್ದು, ಕನಿಷ್ಠ ಆಮದು ದರವನ್ನು 1 ಕೆ.ಜಿಗೆ ರೂ.162ಕ್ಕೆ ಏರಿಸಿದ ಬಳಿಕವೂ ವರ್ತಕರು ಆಮದು ಅಡಿಕೆಯತ್ತ ಮನ ಮಾಡುತ್ತಿರುವುದನ್ನು ಗಂಭೀರವಾಗಿ ಪರಿಶೀಲಿಸುವುದಾಗಿ ಹೇಳಿದರೆನ್ನಲಾಗಿದೆ. ಅಲ್ಲಿದೆ ಕೃಷಿಕರ ರಕ್ಷಣೆಗಾಗಿ ಸರಕಾರ ಬದ್ಧ ಈ ಬಗ್ಗೆ ಸೂಕ್ತ ಕಾರ್ಯಸೂಚಿಯೊಂದನ್ನು ರೂಪಿಸುವುದಾಗಿ ಭರವಸೆ ನೀಡಿದರೆನ್ನಲಾಗಿದೆ.

ಈ ನಿಯೋಗದಲ್ಲಿ ಅಡಿಕೆ ಬೆಳೆಗಾರರ ಸಂಘದ ಪ್ರಮುಖರಾಗಿ ಕ್ಯಾಂಪ್ಕೋ ಅಧ್ಯಕ್ಷ ಎಸ್ಆರ್ ಸತೀಶ್ಚಂದ್ರ ಉಪಾಧ್ಯಕ್ಷ ಯಡಗೆರೆ ಸುಬ್ರಹ್ಮಣ್ಯ ಕ್ಯಾಂಪ್ಕೊ ನಿರ್ದೇಶಕ ಕೊಂಕೋಡಿ ಪದ್ಮನಾಭ, ತುಮ್ಕೋಸ್, ಟಿ. ಎಸ್. ಎಸ್. ಮೊದಲಾದ ಸಹಕಾರಿ ಸಂಸ್ಥೆಗಳ ಪ್ರತಿನಿಧಿಗಳು ಒಳಗೊಂಡಿದ್ದರೆನ್ನಲಾಗಿದೆ. ನಿಯೋಗದ ನೇತ್ರತ್ವದಲ್ಲಿ ಕೇಂದ್ರ ರಾಸಾಯನಿಕ ಮತ್ತು ರಸಗೊಬ್ಬರ ಸಚಿವ ಅನಂತಕುಮಾರ್ ಮತ್ತು ಡಿ.ವಿ. ಸದಾನಂದ ಗೌಡ, ಜಿ. ಎಂ. ಸಿದ್ದೇಶ್ವರ, ರಾಜ್ಯ ಬಿಜೆಪಿ ಅಧ್ಯಕ್ಷರೂ ಸಂಸದರೂ ಆಗಿರುವ ಯಡಿಯೂರಪ್ಪ, ಸಂಸದ ನಳಿನ್‌ಕುಮಾರ್ ಕಟೀಲ್, ಅಯನೂರ್ ಮಂಜುನಾಥ್ ಮಾಜಿ ಸಚಿವ ಮತ್ತು ಶಾಸಕ ವಿಶ್ವೇಶ್ವರ ಹೆಗಡೆ ಕಾಗೇರಿ, ಡಿ. ಎನ್ ಜೀವರಾಜ್, ಅರಗ ಜ್ಞಾನೇಂದ್ರ ಮೊದಲಾದ ಗಣ್ಯರು ಭಾಗವಹಿಸಿದ್ದರೆನ್ನಲಾಗಿದೆ.